ಶ್ರೀ ಆರ್. ಎಲ್. ಜಾಲಪ್ಪ(ಸಹಕಾರ ಮಂತ್ರಿಗಳು).—

ಅ) ನಬಾರ್ಡಿನವರಿಂದ ಅನುಮೋದಿತವಾದ ವಿಫಲ ಬಾವಿ ಯೋಜನೆ ಪ್ರಕಾರ ನೀರಿನ ಇಳುವರಿ ಪ್ರಮಾಣ ಪರೀಕ್ಷೆ ಬಾವಿಯಲ್ಲಿ ವಿಫಲವಾಗಿವೆಯೇ ಇಲ್ಲವೇ ಎಂಬುದನ್ನು ನಿರ್ಧರಿಸಲು ಅಗತ್ಯವಾಗಿದೆ. ಇಳುವರಿ ಪ್ರಮಾಣ ಪರೀಕ್ಷೆಯನ್ನು ಈ ಉದ್ದೇಶಕ್ಕಾಗಿ ಬಾವಿ ಕೊರೆಯುವ ಸಂಸ್ಥೆಗಳಿಂದ ಗಣಿ ಮತ್ತು ಭೂಗರ್ಭ ಇಲಾಖೆಯ ಅಧಿಕಾರಿಗಳು ಅಥವಾ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕಿನ ಅಧಿಕಾರ ನೀಡಲ್ಪಟ್ಟ ಅಧಿಕಾರಿ ಮತ್ತು ಸಾಲಗಾರರ ಸಮಕ್ಷಮದಲ್ಲಿ ಈ ಪರೀಕ್ಷೆಯನ್ನು ನಡೆಸಲ್ಪಟ್ಟಿರುತ್ತದೆ.

ಆ) ಗಣಿ ಮತ್ತು ಭೂಗರ್ಭ ಇಲಾಖೆಯು ತಮ್ಮ ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ ಇಳುವರಿ ಪ್ರಮಾಣ ಪರೀಕ್ಷೆಯಲ್ಲಿ ಭಾಗವಹಿಸಿ ಮತ್ತು ತಮ್ಮ ಎದುರಿನಲ್ಲಿ ನಡೆದ ಇಳುವರಿ ಫಲಿತಾಂಶವನ್ನು ಪ್ರಮಾಣೀಕರಿಸಲು ಅಧಿಕಾರ ನೀಡಿರುತ್ತಾರೆ. ಅದೇ ರೀತಿ ಕರ್ನಾಟಕ ಭೂ ಅಭಿವೃದ್ಧಿ ಮಂತ್ತು ಕೃಷಿ ಬ್ಯಾಂಕಿನವರು ತಮ್ಮ ತಂತ್ರಜ್ಞ ಅಧಿಕಾರಿ ಭೂಗರ್ಭಶಾಸ್ತ್ರ ಅಸಿಸ್ಟೆಂಟ್ ಜಿಯೋಫಿಸಿಸ್ಟ್‌ಗಳ ಸಮಂಕ್ಷಮದಲ್ಲಿ ನಡೆಸಿದ ಇಳುವರಿ ಪರೀಕ್ಷೆ ಫಲಿತಾಂಶವನ್ನು ಪ್ರಮಾಣೀಕರಿಸಲು ಅಧಿಕಾರ ನೀಡಿರುತ್ತಾರೆ.

ದಾರಿ ದೀಪಗಳ ವ್ಯವಸ್ಥೆ ಬಗ್ಗೆ.

೫೧೫. ಶ್ರೀ ಕೆ. ಕುಶಾಲ(ಸಂಳ್ಳ).—ಮಾನ್ಯ ವಿದ್ಯುತ್‌ಚಕ್ತಿ ಸಚಿವರು ಕೆಳಕಂಡ ಪ್ರಶ್ನೆಗಳಿಗೆ ದಯವಿಯಿಟ್ಟು ಉತ್ತರಿಸುವರೆ ?

ಅ) ರಾಜ್ಯ ಭೂ ಕಂದಾಯದ ವಸೂಲಾದ ನಿಧಿಯಿಂದ ಶೇಕಡ ೩೦ರಷ್ಟು ಪಂಚಾಯಿತಿಗೆ ನೀಡುವ ಹಣವನ್ನು ಕಡಿತಗೊಳಿಸಿ ದಾರಿ ದೀಪ ಹಾಕಿಸುವ ವ್ಯವಸ್ಥೆಯನ್ನು ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಗೆ ವಹಿಸಿಕೊಟ್ಟಂದಿನಿಂದ ದಾರಿ ದೀಪದ ವ್ಯವಸ್ಥೆ ಸರಿಯಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಆ) ಹಾಗಿದ್ದಲ್ಲಿ ಸರ್ಕಾರದವರು ಈ ಬಗ್ಗೆ ಸೂಕ್ತ ವ್ಯವಸ್ಥೆಯನ್ನು ಕೈಗೊಳ್ಳುವುದೆ ?

ಶ್ರೀ ಜೆ. ಎಸ್. ದೇಶ್‌ಮುಖ್(ವಿದ್ಯುತ್ ಗಣಿ ಮತ್ತು ಭೂ ವಿಜ್ಞಾನ ಮಂತ್ರಿಗಳು).—

ಅ) ಬಂದಿಲ್ಲ. ಆದರೆ ೧೯೮೪-೮೫ನೇ ಸಾಲಿನಲ್ಲಿ ಮಾತ್ರ ಸರ್ಕಾರ ವಿದ್ಯುಚ್ಛಕ್ತಿ ಮಂಡಳಿಗೆ ೧೦ ಲಕ್ಷ ರೂಪಾಯಿಗಳು ನೀಡಿ ಆ ವರ್ಷದಲ್ಲಿ ಸುಟ್ಟು ಹೋಗಿರುವ ಬೀದಿ ದೀಪಗಳನ್ನು ಒಂದು ಸುತ್ತು ಬದಲಾಯಿಸಲು ವ್ಯವಸ್ಥೆ ಮಾಡಿತ್ತು. ಆದರೆ ೧೯೮೫-೮೬ರಲ್ಲಿ ಸರ್ಕಾರವೇ ಬಲ್ಬ್‌ಗಳನ್ನು ಖರೀದಿಸಿದೆ. ಮಂಡಳಿಯಂ ಅದಕ್ಕೆ ಬಲ್ಬ್‌ಗಳನ್ನು ಒದಗಿಸಿದ ಕಡೆ ಸುಟ್ಟು ಹೋದ ದೀಪ ಬದಲಾಯಿಸುತ್ತದೆ.

ಆ) ಸರ್ಕಾರವು ಗ್ರಾಮ ಪಂಚಾಯಿತಿ ಪ್ರದೇಶಗಳಲ್ಲಿ ಸುಟ್ಟು ಹೋಗುವ ಬಲ್ಬ್‌ಗಳನ್ನು ಬದಲಾಯಿಸಲು ಬೇಕಾಗುವ ಬಲ್ಬ್‌ಗಳನ್ನು ಮೈಸೂರು ಲ್ಯಾಂಪ್ ವರ್ಕ್ಸ್‌ನಿಂದ ಖರೀದಿಸಿ ಅವು ಅಸಿಸ್ಟೆಂಟ್ ಕಮೀಷನರುಗಳ ಮೂಲಕ ಗ್ರಾಮ ಪಂಚಾಯಿತಿಗೆ ಸರಬರಾಜಾಗಲು ವ್ಯವಸ್ಥೆ ಮಾಡಿದೆ. ಗ್ರಾಮ ಪಂಚಾಯಿತಿಯವರು ವಿದ್ಯುತ್ ಮಂಡಳಿಗೆ ಬದಲಾವಣೆಗೆ ಬೇಕಾಗುವ ಬಲ್ಬ್‌ಗಳನ್ನು ಒದಗಿಸುವರು.

ವಿಜಾಪುರ ಜಿಲ್ಲೆಯಲ್ಲಿ ಗೋಶಾಲೆಗಳನ್ನು ಪ್ರಾರಂಭಿಸುವ ಬಗ್ಗೆ.

೧೭೪. ಶ್ರೀ ಬಾಬುರೆಡ್ಡಿ ತುಂಗಳ (ಬೀಳಗಿ).—ಮಾನ್ಯ ಕಂದಾಯ ಹಾಗೂ ಯೋಜನಾ ಸಚಿವರು ಕೆಳಕಂಡ ಪ್ರಶ್ನೆಗಳಿಗೆ ದಯವಿಯಿಟ್ಟು ಉತ್ತರಿಸುವರೆ ?

ಅ) ವಿಜಾಪುರ ಜಿಲ್ಲೆಯಲ್ಲಿ ಅಭಾವ ಪರಿಹಾರ ಕಾರ್ಯಕ್ರಮದ ಅಂಗವಾಗಿ ಸರಕಾರ ಆರಂಭಿಸಿರುವ ಗೋಶಾಲೆಗಳು ಎಷ್ಟು ? (ತಾಲ್ಲೂಕುವಾರು ಮಾಹಿತಿ ಒದಗಿಸುವುದು)

ಆ) ಇಂತಹ ಗೋಶಾಲೆಯನ್ನು ಬೀಳಗಿ ತಾಲ್ಲೂಕಿನಲ್ಲಿ ತೆರೆಯಲಾಗಿದೆಯೇ ?

ಇ) ಹಾಗಿದ್ದಲ್ಲಿ, ಗೋಶಾಲೆಯನ್ನು ಆರಂಭಿಸದಿರಲು ಕಾರಣವೇನು ? ಹಾಗೂ ಇನ್ನು ಮೇಲಾದರೂ ಆರಂಭಿಸುವ ಯೋಜನೆ ಸರ್ಕಾರದವರ ಗಮನದಲ್ಲಿದೆಯೇ ?